
ರೂಪಿಸಿದ ಆ ಹೊಲೋಗ್ರಾಂ ನೋಡಿ ಮೋಹಿತನಾದ. ಬ್ರಹ್ಮ ತಾನೇ ರೂಪಿಸಿದ ಸರಸ್ವತಿಯನ್ನು ಕಂಡು ಮೋಹ ಪರವಶಗೊಂಡಂತೆ. ಆಮೇಲೆ ಉಳಿದವರೆಲ್ಲಾ ಬೈದರು ಅಂತ ನಾಚಿಕೆಯಾಗಿ ಬ್ರಹ್ಮ ತನ್ನ ದೇಹವನ್ನೇ ತೊರೆದನಂತೆ. ಆದರೆ ಅಖಿಕೊ ಕೊಂಡೋ ಎಂಬ ಆಧುನಿಕ ಬ್ರಹ್ಮ ಅದೇಥರ ಪ್ರತಿರೂಪಿ ಬೊಂಬೆ ಮಾಡಿಕೊಂಡು ಅದನ್ನೇ ಮದುವೆಯಾಗಿದ್ದೀನಿ ಅಂತ ಕಲ್ಪಿಸಿಕೊಂಡು ಸುಖವಾಗಿದ್ದಾನೆ. ಹೊಲೊಗ್ರಾಂ ಒಳಗಿರುವ ಬಿಂಬ ಮೂಲವಾದಲ್ಲಿ ಅದರ ಪ್ರತಿರೂಪಿ ಬೊಂಬೆ ಇವನಿಗೆ ಉತ್ಸವಮೂರ್ತಿ ಇದ್ದಂತೆ. ಅಂದರೆ ಒಳಗೆ ಅಡುಗೆಗೊಬ್ಬರು ಹೊರಗೆ ವಾಕಿಂಗ್‌ಗೆ ಒಬ್ಬರು ಎಂಬಂತೆ.



ನನ್ನ ಮಂಡಲದಲ್ಲೆ ನನ್ನ ಅಂಡಲೆದಾಟ
ಹೊರಗಿನದು ಕಾಟ ಮಾಟ
ಬೇಟವೋ ಕೂಟವೋ ಪಾಟಾಗಿ
ಸುರಿದದ್ದು
...ಗುಣಿಸಿದ ಗುಣಾಕಾರ, ಭಾಜ್ಯ
ಭಾಗ್ಯ, ಉಂಡಿದ್ದು ಭೋಗ್ಯ

ಬೇಂದ್ರೆ ಹೀಗೆ ಬರೆದರು. ಈ ರೀತಿ ಇವನ ದಾಂಪತ್ಯ ನಡೆದಿದೆ. ಈ ಮದುವೆಗೆ ಅವನು ಖರ್ಚು ಮಾಡಿದ್ದು ಹದಿನೇಳು ಸಾವಿರ ಡಾಲರ್. ನಲವತ್ತು ಜನ ಅತಿಥಿಗಳ ಮುಂದೆ. ಅಲ್ಲ ಇದು ಜೀವನಾನಾ? ನಿನ್ನನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡ್ತೀನಿ ಅಂತ ಕೆಲವರು ಡೈಲಾಗ್ ಹೊಡೆಯೋ ಹಾಗೆ ನಿನ್ನನ್ನು ಡೆಸ್ಕ್ ಟಾಪಲ್ಲಿ ಇಟ್ಟು ಕಾಪಾಡ್ತೀನಿ ಅಂತ ಹೇಳಿದನಾ ಇವನು?

ಒಟ್ಟು ಜಗತ್ತು ನೇರ ಹಾದಿಯಲ್ಲಿ ಸಾಗುವುದಿಲ್ಲ ಎಂದು ಹೇಳಬೇಕಿಲ್ಲವೇನೋ. ಇಂಥವರ ಇಂಥ ಹಾದಿಗಳು ಮುಂದೆ ಅನೇಕರಿಗೆ ಆದರ್ಶವಾಗಿ ಮನೆಗಳನ್ನು, ಆಭರಣಗಳನ್ನು, ಬಸ್ಸುಗಳನ್ನು, ಟ್ರೇನ್‌ಗಳನ್ನು ಮದುವೆಯಾಗ ತೊಡಗಿದರೆ ಮಾಡುವುದೇನು? ಹೀಗೆ ಬರೆಯುತ್ತಿರುವಾಗಲೇ ಹಿಂದೆ ಎಲ್ಲೋ ಓದಿದ್ದ ಸಂಗತಿಯೊಂದು ನೆನಪಾಗುತ್ತಿದೆ. ಯಾರೋ ಒಬ್ಬಳು ರೈಲ್ವೇ ಸ್ಟೇಷನ್‌ನನ್ನೇ ಮದುವೆಯಾದಳಂತೆ. ಸದ್ಯ ರೈಲ್ವೆ ಇಲಾಖೆ ಅದನ್ನು ಮಾನ್ಯ ಮಾಡಲಿಲ್ಲ. ಮುಂದೆ ಅಪ್ಲಿಕೇಶನ್ ಫಾರಂಗಳಲ್ಲಿ ಮದುವೆಯಾಗಿದೆಯೇ? ಹಾಗಿದ್ದರೆ ಯಾರ ಜೊತೆ ಅಥವ ಯಾವುದರ ಜೊತೆಗೆ ಎಂದು ಕೇಳಬೇಕಾದೀತು. male / female ಜೊತೆಗೆ article ಎಂದೂ ಸೇರಿಸಬೇಕಾದೀತು.